## ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಂ. ಎಫ್. ಸಿ. ನ್ಯಾಯಾಲಯ ಬೇಲೂರು.

---

ಕ್ರಿಮಿನಲ್ ಮಿಸ್ ನಂ : **224/2019** ದಿನಾಂಕ : **28-07-2023**

ಆರ್.ಡಬ್ಲ್ಯೂ : **1**

---

| | | |
|---|---|---|
| ಹೆಸರು | ಪರಮೇಶ ಉ ರವಿಚಂದ್ರ | ದಿಃ 28-07-2023 |
| ತಂದೆ ಹೆಸರು | ರಾಮಪ್ಪ | |
| ವಯಸ್ಸು | 41 ವರ್ಷ | |
| ಉದ್ಯೋಗ | ಕಾರ್ಯದರ್ಶಿ, ಶೃಂಗೇರಿ ಗ್ರಾಮ ಪಂಚಾಯ್ತಿ | |
| ವಾಸ | ಶೃಂಗೇರಿ | ವಿಧಿಬದ್ಧವಾಗಿ ಪ್ರಮಾಣೀಕರಿಸಲಾಯಿತು. |

:: ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು::

*******

**::ಮುಖ್ಯ ವಿಚಾರಣೆ: ಎದುರುದಾರರ ಪರ ವಕೀಲರಾದ ಶ್ರೀ ಬಿ ಎಸ್ ಪಿ ಕೆ ರವರಿಂದ::**

ನನ್ನ ಮತ್ತು ಅರ್ಜಿದಾರರ ವಿವಾಹವು ದಿ:**18-04-2010** ರಂದು ಬೇಲೂರು ತಾಲೂಕಿನ ಹಳೇಬೀಡಿನ **1** ನೇ ಅರ್ಜಿದಾರರ ಮನೆಯಲ್ಲಿ ನೆರವೇರಿರುತ್ತದೆ. ಮದುವರಯಾದ ನಂತರದಿಂದಲೂ ಅರ್ಜಿದಾರರು ಮತ್ತು ನನ್ನ ನಡುವೆ ಉತ್ತಮ ಹೊಂದಾಣಿಕೆ ಇರಲಿಲ್ಲ. ನಮ್ಮಿಬ್ಬರ ವಿವಾಹ ಸಂಬಂಧದಿಂದ **2** ಮತ್ತು **3** ನೇ ಅರ್ಜಿದಾರರು ಜನಿಸಿರುತ್ತಾರೆ. **6** ವರ್ಷಗಳ ಹಿಂದೆ ಅರ್ಜಿದಾರರು ವಿನಾಕಾರಣ ನನ್ನನ್ನು ಮತ್ತು ನನ್ನ ತಂದೆ ತಾಯಿಯನ್ನು ನೋಡಿಕೊಳ್ಳಲು ಆಗುವುದಿಲ್ಲ ಎಂದು ಹೇಳಿ ಸ್ವತಃ ತಾವೇ ಮನೆ ಬಿಟ್ಟು ಹೋಗಿರುತ್ತಾರೆ. ನಾನು ದೈಹಿಕವಾಗಿ ಅಂಗವಿಕಲನಾಗಿದ್ದು ಅದರ ನಾತೆಯಿಂದ ನನಗೆ ನೌಕರಿ ದೊರೆತಿರುತ್ತದೆ. ಅರ್ಜಿದಾರರು ಹೇಳಿದಂತೆ ನಾನು ಯಾವುದೇ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡಿರುವುದಿಲ್ಲ. ಅರ್ಜಿದಾರರನ್ನು ನಾನು ನಿರ್ಲಕ್ಷ್ಯ ಮಾಡಿರುವುದಿಲ್ಲ. ನನಗೆ ಸ್ವಂತವಾಗಿ ಯಾವುದೇ ಕೆಲಸ ಮಾಡಿಕೊಳ್ಳಲು ಆಗುವುದಿಲ್ಲ ಆದ ಕಾರಣ ಬೇರೆ ವ್ಯಕ್ತಿಯನ್ನು ನನ್ನನ್ನು ನೋಡಿಕೊಳ್ಳಲು ನೇಮಕ ಮಾಡಿಕೊಂಡಿರುತ್ತೇನೆ ಮತ್ತು ಕಚೇರಿಗೆ ಬೇರೊಬ್ಬರ ವಾಹನದಲ್ಲಿ ಅವರ ಸಹಾಯದಿಂದ ಹೋಗಿ ಬಂದು ಮಾಡುತ್ತೇನೆ ಆದ ಕಾರಣ ನನಗೆ ಸ್ವಂತ ಖರ್ಚುಗಳು ಹೆಚ್ಚು ಇರುತ್ತದೆ. ಅರ್ಜಿದಾರರನ್ನು ನಾನು ನಿರ್ಲಕ್ಷ್ಯ ಮಾಡಿರದೆ ಅವರೇ ಮನೆ ಬಿಟ್ಟು ಹೋಗಿರುವ ಕಾರಣ ಅವರಿಗೆ ಜೀವನಾಂಶ ಕೊಡಲು ನಾನು ಬಾದ್ಯನಿರುವುದಿಲ್ಲ. ಅರ್ಜಿದಾರರು ನನ್ನಿಂದ ದೂರಾಗಿ **5-6** ವರ್ಷಗಳಾಗಿದ್ದು ಆಕೆಯ ಮೇಲೆ ನನಗೆ ಯಾವುದೇ ಭಾವನೆಗಳು ಉಳಿದಿರುವುದಿಲ್ಲ. ಆದ ಕಾರಣ ಅರ್ಜಿದಾರರು ಯಾವುದೇ ಪರಿಹಾಕ್ಕೆ

ಅರ್ಹರಿರುವುದಿಲ್ಲ ಎಂದು ಪರಿಗಣಿಸಿ ಅರ್ಜಿಯನ್ನು ವಜಾ ಮಾಡಬೇಕಾಗಿ ಕೋರುತ್ತೇನೆ. ಮಕ್ಕಳು ನನ್ನ ಬಳಿ ಬಿಟ್ಟರೆ ನಾನು ನೋಡಿಕೊಳ್ಳುತ್ತೇನೆ.

ನಾನು ನ್ಯಾಯಾಲಯಕ್ಕೆ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಈ ಕೆಳಕಂಡಂತೆ ಕ್ರಮವಾಗಿ ಗುರುತಿಸಲಾಯಿತು.

| | | |
|---|---|---|
| ನಿಆರ್ | 8 | ದಿಃ**22-10-2019** ರ ಸಖರೆಪಟ್ಟಣ ಪೋಲಿಸ್ ಠಾಣೆಯವರ ಹಿಂಬರಹ |
| ನಿಆರ್ | 9 | ಕ್ರೈ ನಂ**. 79/2019** ರ ಪ್ರಥಮ ವರ್ತಮಾನ ವರದಿ ಮತ್ತು ದೂರು |
| ನಿಆರ್ | 10 | ಡಿಸ್ ಚಾರ್ಜ್ಸಮ್ಮರಿ |
| ನಿಆರ್ | 11 | ಡಿಸ್ ಚಾರ್ಜ್ಸಮ್ಮರಿ |
| ನಿಆರ್ | 12 | ಶಂಕರ ಐ ಹಾಸ್ಪಿಟಲ್ ರವರ ಸ್ಕ್ಯಾನಿಂಗ್ ವರದಿ |
| ನಿಆರ್ | 13 | ಶಂಕರ ಐ ಹಾಸ್ಪಿಟಲ್ ರವರ ಬಿಲ್ಲು |
| ನಿಆರ್ | 14 | ಜೀವನ್ ಹಾಸ್ಪಿಟಲ್ ರವರ **Prescription** |
| ನಿಆರ್ | 15 | ಕರೂರು ಆರ್ಥೋಪಿಡಿಕ್ ಸೆಂಟರ್ ರವರ **Prescription** |
| ನಿಆರ್ | 16 | ನಂದಿ ಕ್ಲಿನಿಕ್ ಲ್ಯಾಬೋರೆಟರಿ ರವರ ವರದಿ |
| ನಿಆರ್ | 17 | ನಂದಿ ಕ್ಲಿನಿಕ್ ಲ್ಯಾಬೋರೆಟರಿ ರವರ ವರದಿ |
| ನಿಆರ್ | 18 | ಶಾರದ ಧನ್ವಂತ್ರಿ ಚಾರಿಟೆಬಲ್ ಹಾಸ್ಪಿಟಲ್ ರವರ ವರದಿ |
| ನಿಆರ್ | 19 | ಲಕ್ಷ್ಮಿ ಆಸ್ಪತ್ರೆ ಇವರ **Prescription** |
| ನಿಆರ್ | 20 | ವೆಂಕಟೇಶ್ವರ ಕ್ಲಿನಿಕಲ್ ಲ್ಯಾಬೋರೆಟರಿ ರವರ ವರದಿ |
| ನಿಆರ್ | 21 | ಕಡೂರು ಸರ್ಕಾರಿ ಆಸ್ಪತ್ರೆಯ ಹೊರರೋಗಿ ದಾಖಲೆ |
| ನಿಆರ್ | 22 | ಕಡೂರು ಸರ್ಕಾರಿ ಆಸ್ಪತ್ರೆಯ ಹೊರರೋಗಿ ದಾಖಲೆ |
| ನಿಆರ್ | 23 | ಮಾರುತಿ ಡಯಾಗ್ನಿಸ್ಟಿಕ್ ಸೆಂಟರ್ ಇವರ ವರದಿ |
| ನಿಆರ್ | 24 | ಮೆಡಿಕಲ್ ಬಿಲ್ಲುಗಳು ಒಟ್ಟು **16** |

(ಅರ್ಜಿದಾರರ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲವಕಾಶ ಕೋರಿದ್ದು ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೇ. ಸರಿ. ಇದೆ

(ಪ್ರಸನ್ನಕುಮಾರ್ ಸಿ.)
ಸಿವಿಲ್ ನ್ಯಾಯಾಧೀಶರು ಹಾಗೂ
ಜೆ. ಎಂ. ಎಫ್. ಸಿ. ಬೇಲೂರು.

Case Called

Respondent present. He got himself examined as RW-1 and examined orally. Ex.R-7 to R-24 marked.

For Cross examination of RW-1 by:30-08-2023

**Civil Judge and JMFC**

**Belur.**